**ಕರ್ನಾಟಕ ಸರ್ಕಾರ**

**ವಿತ್ತೀಯ ಕಾರ್ಯನೀತಿ ಸಂಸ್ಥೆ**

ಸಂ: FPI-ESTOPERS(RF)/6/2023-ADMN-FPI
(e-Office file)

ನಿರ್ದೇಶಕರ ಕಛೇರಿ,
ವಿತ್ತೀಯ ಕಾರ್ಯನೀತಿ ಸಂಸ್ಥೆ,
ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು.
ದಿನಾಂಕ: 12.01.2024

**ಅಧಿಸೂಚನೆ**

**ವಿಷಯ** : ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಸಂಶೋಧನಾ ಫೆಲೋ(Research Fellow) ಮತ್ತು ಸಂಶೋಧನಾ ಅಸೋಸಿಯೇಟ್ (Research Associate) ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

*****

ಸಂಶೋಧನಾ ಫೆಲೋ ಮತ್ತು ಸಂಶೋಧನಾ ಅಸೋಸಿಯೇಟ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು, ಅರ್ಥಶಾಸ್ತ್ರದ ಯಾವುದೇ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಥವಾ ವ್ಯವಹಾರ ನಿರ್ವಹಣಾ ಶಾಸ್ತ್ರ (ಬಿಸಿನೆಸ್ ಮ್ಯಾನೆಜ್‌ಮೆಂಟ್), ವಾಣಿಜ್ಯಶಾಸ್ತ್ರ (ಕಾಮರ್ಸ್), ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಮಾಹಿತಿ ತಂತ್ರಜ್ಞಾನ (ಇನ್‌ಫರ್ಮೇಶನ್ ಟೆಕ್ನಾಲಜಿ), ಮಾನವ ಸಂಪನ್ಮೂಲಗಳು (ಹ್ಯೂಮನ್ ರಿಸೋರ್ಸ್) ಸಾರ್ವಜನಿಕ ಆಡಳಿತ (ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್), ಡೆವಲೆಪ್‌ಮೆಂಟ್ ಸ್ಟಡೀಸ್, ಜನಸಂಖ್ಯಾ ಶಾಸ್ತ್ರ (ಪಾಪುಲೇಶನ್ ಸ್ಟಡೀಸ್), ಸಾರ್ವಜನಿಕ ನೀತಿ (ಪಬ್ಲಿಕ್ ಪಾಲಿಸಿ), ಕೃಷಿ ಅರ್ಥಶಾಸ್ತ್ರ & ಸಂಖ್ಯಾ ಶಾಸ್ತ್ರ (ಅಗ್ರಿಕಲ್ಚರ್ ಎಕಾನಾಮಿಕ್ಸ್ & ಸ್ಟ್ಯಾಟಿಸ್ಟಿಕ್ಸ್) ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿತ್ತೀಯ ಕಾರ್ಯನೀತಿ ಸಂಸ್ಥೆಯ (ವಿಕಾಸಂ) ಸಂಕ್ಷಿಪ್ತ ಪರಿಚಯ:** ಯೋಜನಾ ಆಯೋಗದ ನೆರವಿನೊಂದಿಗೆ ಕರ್ನಾಟಕ ಸರ್ಕಾರವು 2007ನೇ ಸಾಲಿನಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಸ್ಥೆಯು ಆರ್ಥಿಕ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರದ ಅಧಿಕಾರಿಗಳಿಗೆ, ವಿತ್ತೀಯ ನೀತಿ ಮತ್ತು ಕಾರ್ಯಾಚರಣೆಗಳ ಬಗ್ಗೆ ಹಾಗೂ ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಸಾರ್ವಜನಿಕ ಹಣಕಾಸು ನಿರ್ವಹಣೆ ಬಗ್ಗೆ ವ್ಯವಸ್ಥಿತವಾದ ತರಬೇತಿ ನೀಡುವುದು ಸಂಸ್ಥೆಯ ಮುಖ್ಯ ಉದ್ದೇಶಗಳಾಗಿದೆ. ಅಲ್ಲದೇ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಸಲಹೆಗಳನ್ನು ಸಹಾ ವಿಕಾಸಂನಿಂದ ನಿರೀಕ್ಷಿಸಲಾಗುತ್ತದೆ.

**ಹುದ್ದೆಯ ಕಾರ್ಯನಿರೀಕ್ಷೆ:** ಆಯ್ಕೆಯಾದ ಸಂಶೋಧನಾ ಫೆಲೋ (RF) ಮತ್ತು ಸಂಶೋಧನಾ ಅಸೋಸಿಯೇಟ್ (RA) ವಿತ್ತೀಯ ಕಾರ್ಯನೀತಿ ಸಂಸ್ಥೆ ನಿರ್ಧರಿಸಿದ ವಿಷಯಗಳ ಕುರಿತು ಸಂಶೋಧನೆ/ಕ್ಷೇತ್ರ ಅಧ್ಯಯನಗಳನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲದೇ ಸಂಸ್ಥೆಯ ತರಬೇತಿ ಚಟುವಟಿಕೆಗಳಿಗೆ, ಮಹಿಳಾ/ಮಕ್ಕಳ ಉದ್ದೇಶಿತ ಆಯವ್ಯಯ ತಯಾರಿಕೆಗೆ ಅಗತ್ಯವಿದ್ದಾಗ ಸಹಕರಿಸಬೇಕು. ಇದರೊಂದಿಗೆ ಆಯ್ಕೆಯಾದ ಅಭ್ಯರ್ಥಿಗಳು ಮಾಹಿತಿಗಳ ಸಂಗ್ರಹಣೆ ಮತ್ತು ನಿರ್ವಹಣೆ, ದಾಖಲೆಗಳನ್ನು ಸಿದ್ಧಪಡಿಸುವುದು, ವರದಿಗಳನ್ನು ಬರೆಯುವುದು, ಅಂಕಿ ಅಂಶಗಳ ವಿಶ್ಲೇಷಣೆಯಲ್ಲಿ ತೊಡಗಿಸಿಕೊಳ್ಳುವುದು, ಉದ್ದೇಶಿತ ತರಬೇತಿ ಚಟುವಟಿಕೆಗಳ ಸಂಯೋಜನೆ, ಹಣಕಾಸು ವಿಷಯ ಕುರಿತಂತೆ ಮಾದರಿ

ಪಠ್ಯಕ್ರಮಗಳ ಅಭಿವೃದ್ಧಿ ಮುಂತಾದವುಗಳನ್ನು ಮಾಡಬೇಕಾಗುತ್ತದೆ. ಅಗತ್ಯವಿದ್ದಾಗ ಬೆಂಗಳೂರಿನ ಹೊರಗೆ ಪ್ರವಾಸ ಮಾಡಬೇಕಾಗಬಹುದು.

**ಟಿಪ್ಪಣಿ:** ಯಾವುದೇ ಅಭ್ಯರ್ಥಿಯು, ಮೇಲಿನ ವಿಷಯಗಳಲ್ಲಿ ಉನ್ನತ ವ್ಯಾಸಂಗ ಮತ್ತು ವಿಶೇಷ ಅಧ್ಯಯನಗಳನ್ನು ಮಾಡಲು ಬಯಸಿದರೆ, ನೇಮಕಾತಿ ಉದ್ದೇಶಗಳಾದ ಸಂಶೋಧನೆ ಮತ್ತು ಇತರ ಚಟುವಟಿಕೆಗಳಿಗೆ ಮತ್ತು ನಿರೀಕ್ಷಿಸಲ್ಪಟ್ಟ ಫಲಿತಾಂಶಗಳ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವಾಗದಿದ್ದಲ್ಲಿ, ಸಂಸ್ಥೆಯು ಪ್ರೋತ್ಸಾಹಿಸಲಿದೆ.

**ಅರ್ಹತೆ:**

I. **ಸಂಶೋಧನಾ ಫೆಲೋ (Research Fellow):**

ವಯಸ್ಸು:ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 40 ವರ್ಷಗಳನ್ನು ಮೀರಿರಬಾರದು.

**ಶೈಕ್ಷಣಿಕ ಅರ್ಹತೆ:**

ಎ) ಅಭ್ಯರ್ಥಿಯು ಅರ್ಥಶಾಸ್ತ್ರದ ಯಾವುದೇ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಥವಾ ವ್ಯವಹಾರ ನಿರ್ವಹಣಾ ಶಾಸ್ತ್ರ (ಬಿಸಿನೆಸ್ ಮ್ಯಾನೆಜ್‌ಮೆಂಟ್), ವಾಣಿಜ್ಯಶಾಸ್ತ್ರ (ಕಾಮರ್ಸ್), ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಮಾಹಿತಿ ತಂತ್ರಜ್ಞಾನ (ಇನ್‌ಫರ್ಮೇಶನ್ ಟೆಕ್ನಾಲಜಿ), ಮಾನವ ಸಂಪನ್ಮೂಲಗಳು (ಹ್ಯೂಮನ್ ರಿಸೋರ್ಸ್) ಸಾರ್ವಜನಿಕ ಆಡಳಿತ (ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್), ಡೆವಲೆಪ್‌ಮೆಂಟ್ ಸ್ಟಡೀಸ್, ಜನಸಂಖ್ಯಾ ಶಾಸ್ತ್ರ (ಪಾಪುಲೇಶನ್ ಸ್ಟಡೀಸ್), ಸಾರ್ವಜನಿಕ ನೀತಿ (ಪಬ್ಲಿಕ್ ಪಾಲಿಸಿ), ಕೃಷಿ ಅರ್ಥಶಾಸ್ತ್ರ & ಸಂಖ್ಯಾ ಶಾಸ್ತ್ರ (ಅಗ್ರಿಕಲ್ಚರ್ ಎಕಾನಾಮಿಕ್ಸ್ & ಸ್ಟ್ಯಾಟಿಸ್ಟಿಕ್ಸ್) ವಿಷಯಗಳಲ್ಲಿ ಕನಿಷ್ಠ 60% ಅಂಕಗಳೊಂದಿಗೆ ಮಾನ್ಯತೆ ಹೊಂದಿರುವ ಯಾವುದೇ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಹೊಂದಿರಬೇಕು.

ಬಿ) ಅಭ್ಯರ್ಥಿಯು ಪಿ.ಎಚ್‌ಡಿ. / ಎಂ.ಫಿಲ್. ವಿದ್ಯಾರ್ಹತೆ ಹೊಂದಿರಬೇಕು ಅಥವಾ ಪಿ.ಎಚ್‌ಡಿ. ವ್ಯಾಸಂಗ ಮಾಡುತ್ತಿರಬೇಕು. ಪಿ.ಎಚ್‌ಡಿ. ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಶಾಶ್ವತ ನೊಂದಣಿ ಪಡೆದಿರಬೇಕು.

ಸಿ) ಅಭ್ಯರ್ಥಿಯು ಕನಿಷ್ಠ 2 ವರ್ಷಗಳ ಸಂಶೋಧನಾ ಅನುಭವ ಹೊಂದಿರಬೇಕು.

ಡಿ) ಕಂಪ್ಯೂಟರ್‌ಗಳಲ್ಲಿ ಎಂಎಸ್ ಆಫೀಸ್ ಬಳಕೆ, ವಿಶೇಷವಾಗಿ ಸಮಾಜ ವಿಜ್ಞಾನ ಸಂಶೋಧನಾ ಕ್ಷೇತ್ರಗಳಲ್ಲಿ ಬಳಸಲ್ಪಡುವ ಸಾಫ್ಟ್ ವೇರ್ ಪ್ಯಾಕೇಜುಗಳಾದ ಇ-ವ್ಯೂಸ್ (e-Views), ಸ್ಟಾಟಾ (STATA), ಎಸ್ ಪಿ ಎಸ್ ಎಸ್(SPSS), ಇತ್ಯಾದಿಗಳನ್ನು ಸಂಶೋಧನೆಯಲ್ಲಿ ಬಳಸುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಇ) ಬೋಧನಾ ಅನುಭವ ಮತ್ತು ದತ್ತಾಂಶ ವಿಶ್ಲೇಷಣಾ ತಂತ್ರಗಳಲ್ಲಿ ಪ್ರಾವೀಣ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಎಫ್) ರೆಫರೀಡ್ ಜರ್ನಲ್‌ಗಳಲ್ಲಿ ಸಂಶೋಧನೆ ಲೇಖನಗಳನ್ನು ಪ್ರಕಟಿಸಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಜಿ) ವಿತ್ತೀಯ ಕಾರ್ಯನೀತಿ ಸಂಸ್ಥೆಯು ಕೈಗೊಳ್ಳುವ ಸಂಶೋಧನೆ / ತರಬೇತಿ / ಸಮಾಲೋಚನೆಗಳ ನಿರ್ದಿಷ್ಟ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಉದಾಹರಣೆಗೆ ತೆರಿಗೆ (ಜಿ.ಎಸ್.ಟಿ & ಅಬಕಾರಿ), ವೆಚ್ಚ, ಸಾಲ ಮತ್ತು ಹೊಣೆಗಾರಿಕೆಗಳು, ವಿತ್ತೀಯ ವಿಕೇಂದ್ರಿಕರಣ, ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನೆ ಮತ್ತು ಯೋಜನಾ ನಿರ್ವಹಣೆ (ಇವುಗಳ ವಿವರಗಳನ್ನು ಅರ್ಜಿ ನಮೂನೆಯ ಅನುಬಂಧದಲ್ಲಿ ನೀಡಲಾಗಿದೆ)

ಹೆಚ್) ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಸಮಾನ ಅರ್ಹತೆ ಹೊಂದಿದ್ದಲ್ಲಿ ಕನ್ನಡ ಭಾಷೆಯ ಮೇಲೆ ಪ್ರಾವೀಣ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**II. ಸಂಶೋಧನಾ ಅಸೋಸಿಯೇಟ್ (Research Associate):**

ವಯಸ್ಸು: ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 40 ವರ್ಷಗಳನ್ನು ಮೀರಿರಬಾರದು.

**ಶೈಕ್ಷಣಿಕ ಅರ್ಹತೆ:**

ಎ) ಅಭ್ಯರ್ಥಿಯು ಅರ್ಥಶಾಸ್ತ್ರದ ಯಾವುದೇ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಥವಾ ವ್ಯವಹಾರ ನಿರ್ವಹಣಾ ಶಾಸ್ತ್ರ (ಬಿಸಿನೆಸ್ ಮ್ಯಾನೇಜ್‌ಮೆಂಟ್), ವಾಣಿಜ್ಯಶಾಸ್ತ್ರ (ಕಾಮರ್ಸ್), ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಮಾಹಿತಿ ತಂತ್ರಜ್ಞಾನ (ಇನ್‌ಫರ್ಮೇಶನ್ ಟೆಕ್ನಾಲಜಿ), ಮಾನವ ಸಂಪನ್ಮೂಲಗಳು (ಹ್ಯೂಮನ್ ರಿಸೋರ್ಸ್) ಸಾರ್ವಜನಿಕ ಆಡಳಿತ (ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್), ಡೆವಲಪ್‌ಮೆಂಟ್ ಸ್ಟಡೀಸ್, ಜನಸಂಖ್ಯಾ ಶಾಸ್ತ್ರ (ಪಾಪುಲೇಶನ್ ಸ್ಟಡೀಸ್), ಸಾರ್ವಜನಿಕ ನೀತಿ (ಪಬ್ಲಿಕ್ ಪಾಲಿಸಿ), ಕೃಷಿ ಅರ್ಥಶಾಸ್ತ್ರ & ಸಂಖ್ಯಾ ಶಾಸ್ತ್ರ (ಅಗ್ರಿಕಲ್ಚರ್ ಎಕಾನಾಮಿಕ್ಸ್ & ಸ್ಟಾಟಿಸ್ಟಿಕ್ಸ್) ವಿಷಯಗಳಲ್ಲಿ ಕನಿಷ್ಠ 55% ಅಂಕಗಳೊಂದಿಗೆ ಮಾನ್ಯತೆ ಹೊಂದಿರುವ ಯಾವುದೇ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಹೊಂದಿರಬೇಕು.

ಬಿ) ಸಂಶೋಧನೆ ಲೇಖನಗಳನ್ನು ಪ್ರಕಟಿಸಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಸಿ) ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಸಮಾನ ಅರ್ಹತೆ ಹೊಂದಿದ್ದಲ್ಲಿ ಕನ್ನಡ ಭಾಷೆಯ ಮೇಲೆ ಪ್ರಾವೀಣ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ಸಂಶೋಧನಾ ಫೆಲೋ ಮತ್ತು ಸಂಶೋಧನಾ ಅಸೋಸಿಯೇಟ್ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು:**

**ಎ) ಹುದ್ದೆಯ ಅವಧಿ:**

ಸಂಶೋಧನಾ ಫೆಲೋ ಮತ್ತು ಸಂಶೋಧನಾ ಅಸೋಸಿಯೇಟ್‌ಗಳ ಆರಂಭಿಕ ನೇಮಕಾತಿ ಅವಧಿಯು 2 ವರ್ಷಗಳಾಗಿದ್ದು, ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಆಧರಿಸಿ ಮತ್ತೆ 2 ವರ್ಷಗಳವರೆಗೆ ವಾರ್ಷಿಕವಾಗಿ ವಿಸ್ತರಿಸಬಹುದಾಗಿದೆ. ಒಟ್ಟಾರೆ ಹುದ್ದೆಯ ಅವಧಿಯು ಗರಿಷ್ಠ 4 ವರ್ಷಗಳ ಅವಧಿಗೆ ಮಾತ್ರ ಸೀಮಿತವಾಗಿದೆ.

**ಬಿ) ಸಂಭಾವನೆ:**

ಮುಕ್ತ-ಮಾರುಕಟ್ಟೆಯಿಂದ ಆಯ್ಕೆಯಾಗುವ ಸಂಶೋಧನಾ ಫೆಲೋ ಮತ್ತು ಸಂಶೋಧನಾ ಅಸೋಸಿಯೇಟ್‌ಗಳಿಗೆ ಕ್ರೋಢೀಕೃತ ಸಂಭಾವನೆ ನೀಡಲಾಗುವುದು. ಅಭ್ಯರ್ಥಿಗಳ ಅನುಭವ / ಅರ್ಹತೆ ಆಧರಿಸಿ ಕೆಳಕಂಡಂತೆ ಸಂಭಾವನೆಯನ್ನು ನಿರ್ಧರಿಸಲಾಗುತ್ತದೆ.

| ವಿವಿರ | ಶ್ರೇಣಿ |
|---|---|
| ಸಂಭಾವನೆ | ಮಾಸಿಕ ರೂ. 35,000/- ರಿಂದ 60,000/ |
| ಸಂಭಾವನೆಗೆ ನಿಗಧಿಪಡಿಸಿದ ಮಾನದಂಡಗಳು | ಅಭ್ಯರ್ಥಿಯು ಹೊಂದಿರುವ ಪಿ.ಎಚ್‌ಡಿ., ಎಂ.ಫಿಲ್., ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್‌ಡಿ. ಪದವಿಗಳಿಸುವ ವ್ಯಾಸಂಗ ಮುಂದುವರಿಕೆ ಮುಂತಾದ ವಿವರಗಳನ್ನು ಪರಿಶೀಲಿಸಿ ಶೈಕ್ಷಣಿಕ ಮಾನದಂಡಗಳಿಗೆ ಹೊಂದಿಸಿ ಅಭ್ಯರ್ಥಿಯ ಕ್ರೋಢೀಕೃತ ಸಂಭಾವನೆಯನ್ನು ನಿಗಧಿ ಮಾಡಲಾಗುತ್ತದೆ. |

| | |
|---|---|
| | I. <u>ಸಂಶೋಧನಾ ಫೆಲೋ</u> (RF):<br>ಎ) ಪಿ.ಎಚ್‌ಡಿ. ಪದವಿಧರರಿಗೆ: ಮಾಸಿಕ ರೂ.55,000/- ದಿಂದ ರೂ. 60,000/-<br>ಬಿ) ಎಂ.ಫಿಲ್. ಪದವಿ ಮತ್ತು ಪಿ.ಎಚ್‌ಡಿ. ವ್ಯಾಸಂಗ ಮಾಡುತ್ತಿರುವವರಿಗೆ: ಮಾಸಿಕ ರೂ. 50,000/- ದಿಂದ ರೂ.55,000/-<br>ಸಿ) ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್‌ಡಿ. ವ್ಯಾಸಂಗ ಮಾಡುತ್ತಿರುವವರಿಗೆ: ಮಾಸಿಕ ರೂ. 45,000/- ರಿಂದ ರೂ. 50,000/-<br>II. <u>ಸಂಶೋಧನಾ ಅಸೋಸಿಯೇಟ್</u> (RA):<br>ಮಾಸಿಕ ಕ್ರೊಢೀಕೃತ ಸಂಭಾವನೆ: ರೂ. 35,000/- ದಿಂದ ರೂ. 45,000/- |

**ಸಿ) ಸಂಶೋಧನಾ ಫೆಲೋ/ಸಂಶೋಧನಾ ಅಸೋಸಿಯೇಟ್‌ಗಳ ಕಾರ್ಯ ದಕ್ಷತೆ ಮತ್ತು ವೃತ್ತಿ ಪ್ರಗತಿಗಾಗಿ ಪ್ರೋತ್ಸಾಹ:**
ಸಂಶೋಧನಾ ಫೆಲೋರವರ ಪ್ರಗತಿಪರ ಶೈಕ್ಷಣಿಕ ಸಾಧನೆಯ ಆಧಾರದ ಮೇಲೆ 3ನೇ ಮತ್ತು 4 ನೇ ವರ್ಷಕ್ಕೆ ವಿಸ್ತರಣೆಯನ್ನು ನೀಡಿದಲ್ಲಿ, ಅವರ ಸಂಭಾವನೆಯನ್ನು 3 ನೇ ವರ್ಷದಲ್ಲಿ ಪ್ರತಿ ತಿಂಗಳಿಗೆ ರೂ. 2,500/- ಮತ್ತು 4 ನೇ ವರ್ಷದಲ್ಲಿ ಮತ್ತೊಮ್ಮೆ ಪ್ರತಿ ತಿಂಗಳಿಗೆ ರೂ. 2,500/- ಗಳಷ್ಟು ಹೆಚ್ಚಿಸಲಾಗುವುದು. ಸಂಶೋಧನಾ ಅಸೋಸಿಯೇಟ್ ಗಳಿಗೆ ಆರಂಭಿಕ ಎರಡು ವರ್ಷಗಳವರೆಗೆ ತಿಂಗಳಿಗೆ ನಿರ್ಧರಿತ ಕ್ರೋಢೀಕೃತ ಸಂಭಾವನೆಯನ್ನು ನೀಡಲಾಗುತ್ತದೆ ಮತ್ತು ಅವರ ಸೇವೆಯನ್ನು ವಿಸ್ತರಿಸಿದಲ್ಲಿ 3 ನೇ ವರ್ಷದಲ್ಲಿ ತಿಂಗಳಿಗೆ ರೂ. 2,500 ಮತ್ತು 4 ನೇ ವರ್ಷದಲ್ಲಿ ಮತ್ತೊಮ್ಮೆ ತಿಂಗಳಿಗೆ ರೂ. 2,500 ಗಳಷ್ಟು ಹೆಚ್ಚಿಸಲಾಗುವುದು. ಸಂಶೋಧನಾ ಫೆಲೋಗಳು ತಮ್ಮ ವೃತ್ತಿ ಜೀವನದಲ್ಲಿ ಪ್ರಗತಿಯನ್ನು ತೋರಿಸಿದಲ್ಲಿ ಮತ್ತು ಮುಂದಿನ ಉನ್ನತ ಪದವಿಯನ್ನು ಪಡೆದಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಅವರಿಗೆ ಆಕರ್ಷಕ ಪ್ರೋತ್ಸಾಹಕಗಳನ್ನು ನೀಡುವ ನೀತಿಯನ್ನು ಸಹ ಹೊಂದಿದೆ.

**ಡಿ) ಸಂಶೋಧನಾ ಫೆಲೋ ಮತ್ತು ಸಂಶೋಧನಾ ಅಸೋಸಿಯೇಟ್‌ಗಳಿಗೆ ವಸತಿ ಸೌಲಭ್ಯ:**
ಅಗತ್ಯತೆಯುಳ್ಳ ಸಂಶೋಧನಾ ಫೆಲೋ/ಸಂಶೋಧನಾ ಅಸೋಸಿಯೇಟ್‌ಗಳಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಸೌಲಭ್ಯಕ್ಕೆ ಶುಲ್ಕ ವಿಧಿಸಲಾಗುತ್ತದೆ ಮತ್ತು ಇದು ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ವಸತಿ ಸೌಲಭ್ಯದ ಲಭ್ಯತೆ ಮತ್ತು ಚಾಲ್ತಿಯಲ್ಲಿರುವ ವಸತಿ ಸೌಲಭ್ಯದ ಮಾರ್ಗಸೂಚಿ ನೀತಿಗಳಿಗೆ ಒಳಪಟ್ಟಿರುತ್ತದೆ.

**ಇ) ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಿದ ನಂತರ ಲಿಖಿತ ಪರೀಕ್ಷೆ ಪ್ರಸ್ತುತಿ ಮತ್ತು ಸಂದರ್ಶನಕ್ಕಾಗಿ ಹಾಜರಾಗುವ ಪರಸ್ಥಳದ ಅಭ್ಯರ್ಥಿಗಳಿಗೆ ಪ್ರಯಾಣ ವೆಚ್ಚ ಮರುಪಾವತಿ:**

ಪರಸ್ಥಳದ ಅಭ್ಯರ್ಥಿಗಳಿಗೆ ಬಸ್ / 3 - ಟಯರ್ ಹವಾ ನಿಯಂತ್ರಿತ ರೈಲು ಮೂಲಕ ಅತಿ ಹತ್ತಿರದ ಮಾರ್ಗದಲ್ಲಿ ತಗಲುವ ಪ್ರಯಾಣ ವೆಚ್ಚ ಮರುಪಾವತಿಗೆ ಅವಕಾಶವಿದೆ.

**ಅರ್ಜಿ ಹಾಕುವ ವಿಧಾನ ಮತ್ತು ಸಾಮಾನ್ಯ ಷರತ್ತುಗಳು:**

I. ಅರ್ಹ ಅರ್ಜಿದಾರರು ತಮ್ಮ ಅರ್ಜಿಗಳನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ತಿಳಿಸಿರುವ ನಿಗದಿತ ನಮೂನೆಯಲ್ಲಿ ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಇವರಿಗೆ ವೈಯಕ್ತಿಕವಾಗಿ ಅಥವಾ ಅಂಚೆಯ ಮೂಲಕ ಅಥವಾ ಇ-ಮೇಲ್ ವಿಳಾಸ director@fpibangalore.gov.in ಮೂಲಕ ದಿನಾಂಕ: 12.02.2024 ರೊಳಗೆ ಅಥವಾ ಅದಕ್ಕೂ ಮೊದಲು ತಲುಪುವಂತೆ ಸಲ್ಲಿಸುವುದು. ವಿಳಂಬವಾಗಿ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

II. ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವ ಅಭ್ಯರ್ಥಿಗಳಿಗೆ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಕಛೇರಿ, ಕೆಂಗೇರಿ ಪೋಸ್ಟ್, ಬೆಂಗಳೂರು-ಮೈಸೂರು ರಸ್ತೆ, ಕೆಂಗೇರಿ, (ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ) ಬೆಂಗಳೂರು -560060 ಇಲ್ಲಿ ಆಯ್ಕೆಯ ಪ್ರಕ್ರಿಯೆಗೆ ಹಾಜರಾಗಲು ಇ-ಮೇಲ್ ಮೂಲಕ ತಿಳಿಸಲಾಗುವುದು.

III. ಆಯ್ಕೆ ಪ್ರಕ್ರಿಯೆಯು ಲಿಖಿತ ಪರೀಕ್ಷೆ, ವಿಷಯ ಮಂಡನೆ (Presentation) ಮತ್ತು / ಅಥವಾ ಸಂದರ್ಶನಗಳನ್ನು ಒಳಗೊಂಡಿರುತ್ತದೆ. ಈ ಪ್ರಕ್ರಿಯೆಯನ್ನು ಭೌತಿಕ /ಆನ್ ಲೈನ್/ ಮಿಶ್ರ ವಿಧಾನಗಳ ಮೂಲಕ ನಡೆಸಲಾಗುತ್ತದೆ (ಕರ್ನಾಟಕ ಸರ್ಕಾರದ ಕಾಲಾನುಕಾಲದ ಕೋವಿಡ್-19ರ ಆರೋಗ್ಯ ಮತ್ತು ಇತರೆ ಸೂಚನೆಗಳ ಪ್ರಕಾರ ).

IV. ಆಯ್ಕೆಯಾದ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಗೆ ಒಳಪಟ್ಟಿದ್ದು ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಕನಿಷ್ಠ ಒಂದು ವರ್ಷದ ಅವಧಿಗೆ ಕಾರ್ಯನಿರ್ವಹಿಸುವ ಷರತ್ತು ಮತ್ತು ನಿಬಂಧನೆಗಳ ಒಪ್ಪಂದಕ್ಕೆ ಒಳಪಡುತ್ತಾರೆ ಮತ್ತು ಕಾರ್ಯಕ್ಷಮತೆಯ ತ್ರೈಮಾಸಿಕ ಪುನಾರವಲೋಕನ ಪರಿಶೀಲನೆಗೆ ಹಾಗೂ ತೃಪ್ತಿಕರ ಫಲಿತಾಂಶ ನೀಡುವ ನಿಬಂಧನೆಗೆ ಒಳಪಟ್ಟಿರುತ್ತಾರೆ.

V. ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳಡಿ ತಿಳಿಸಿರುವ ಅಂಶಗಳಂತೆ ಮತ್ತು ಸರ್ಕಾರವು ಕಾಲಕಾಲಕ್ಕೆ ಜಾರಿಮಾಡುವ ಸಾಮಾನ್ಯ ಮಾರ್ಗಸೂಚಿಗಳಂತೆ ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತದೆ.

VI. ಹುದ್ದೆಗೆ ನಿಗಧಿಪಡಿಸಿರುವ ಅರ್ಜಿ ನಮೂನೆಯನ್ನು ವೆಬ್‌ಸೈಟ್ https://fpibengaluru.karnataka.gov.in/ & https://www.finance.karnataka.gov.in/ ನಲ್ಲಿ ಪಡೆಯಬಹುದು.

ನಿರ್ದೇಶಕರ ಪರವಾಗಿ,
ವಿತ್ತೀಯ ಕಾರ್ಯನೀತಿ ಸಂಸ್ಥೆ,
ಬೆಂಗಳೂರು.

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
   ಇವರಿಗೆ ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆಗೆ ಅವಕಾಶ ನೀಡಲು ವಿನಂತಿಯೊಂದಿಗೆ.
2. ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸೂಚನಾ ಫಲಕ.
3. ವಿತ್ತೀಯ ಕಾರ್ಯನೀತಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.
4. ವಿಶ್ವವಿದ್ಯಾನಿಲಯಗಳ/ಸಂಶೋಧನಾ ಸಂಸ್ಥೆಗಳ ಎಲ್ಲಾ ಮುಖ್ಯಸ್ಥರಿಗೆ.

# ANNEXURE

## FOCUSED AREAS UNDER 6 FUNCTIONAL UNITS OF FPI
## (as per GO No: AE 03 SAVIYO 2020, Bengaluru: Dated 17/03/2020)

| Functional Unit | Focus areas of training, academic and research |
|---|---|
| **1. Taxation (GST and Excise)** | Analysis of tax policy and resource forecasting including:<br>1. Analysis of macroeconomic indicators and revenue trends including tracking revenue collections.<br>2. Analysis of tax policy and impact on government finances.<br>3. Providing accurate and credible revenue estimates, forecasts and projections to support Government fiscal planning and management (e.g. Medium Term Fiscal Plan). |
| **2. Expenditure** | Analysis of expenditure planning, analysis and project evaluation including:<br>1. Support budget formulation through analytical work in areas of baseline spending estimates, expenditure prioritization, fiscal impacts of policy changes and programme trends, medium-term expenditure planning, and the integration of Plan initiatives and capital projects into the medium term fiscal plan.<br>2. Study on sequencing of expenditure by Departments and programmes them with revenue forecast to minimise the mismatch between revenue flows and expenditure.<br>3. Conduct evaluations of programmes, schemes or policies to assess their effectiveness and efficiency for the purposes of<br>(a) enhancing their usefulness to the Government, (b) ensuring that programmes are continued with desired outcomes, (c) helping the Government to redirect resources from less productive to more productive uses, and (d) aiding the Government in the process of curtailing or eliminating unproductive programmes in favour of other worthy causes.<br>4. Treasury management - Integrated Public Financial Management System of GoK - Public Financial Management System of Government of India.<br><br>**Emerging focus areas:**<br>(i) Gender Budget: Support to the Government for preparation of annual Gender Budget.<br>(ii) Child Budget: Support to the Government for preparation of annual Child Budget.<br>(iii) Sector-specific budget studies, such as, education, health, social welfare, women and child development, rural development and housing with special reference to regional imbalances and income distribution issues. |

| | |
|---|---|
| **3. Debt and Liabilities Management** | 1. Tracking, managing, and planning for the Government's debt, loans, guarantees, payment schedules, contingent liabilities, cash flow plans, risk management strategies and other debt- related information.<br>2. Linking debt management and expenditure planning for Government's resource planning efforts. |
| **4. Fiscal Decentralization** | Analysis and monitoring the (a) efforts by the State towards fiscal decentralization, (b) systems to better the fiscal relations between the State and the Local Bodies, and (c) fiscally empower the Local Bodies further.<br><br>**Emerging focus areas:**<br>Implications of recommendations of Central Finance Commissions (e.g. current 15th Finance Commission) recommendations on State Finances. |
| **5. Audit and Accounts** | Analysis of Government Finance/ Accounts, Internal Finance & Audit and Financial Management.<br><br>**Emerging focus areas:**<br>Gender Audit<br>Environmental Audit. |
| **6. Project Management** | Project Management, Project Preparation and Appraisal, Public-Private Partnership Programmes and its models, Contract Design and Contract Management. |

*********************************************